6. ಎಂ. ಶಿವಾನಂದ
7. ಅಶೋಕ ಕಾಟ್ವೆ
8. ಕೆ. ವಿರೂಪಾಕ್ಷಪ್ಪ

10. ವಸತಿ ಸೌಕರ್ಯ ಸಮಿತಿ

1. ಶ್ರೀ ಶೈಲಪ್ಪ ಬಿದರೂರ
2. ಶಿವಾನಂದ ಎಸ್. ಪಾಟೀಲ್
3. ಯು. ಹೆಚ್. ತಿಮ್ಮಣ್ಣ
4. ಹೆಚ್. ಎಸ್. ಪ್ರಕಾಶ್
5. ಮಾರುತಿರಾವ್ ಪವಾರ್ ಇ.
6. ಡಿ. ಎಸ್. ಮಾದಪ್ಪ
7. ಬಿ. ಎಸ್. ಪಾಟೀಲ್ (ಮನಗೋಳಿ)
8. ಬಿ. ಮುನಿಯಪ್ಪ

ಕರ್ನಾಟಕ ವಿಶ್ವವಿದ್ಯಾನಿಲಯದ ಸೆನೆಟ್

1. ಕಾರಜೋಳ ಗೋವಿಂದ ಮಕಟಪ್ಪ
2. ಸಿ. ಎಂ. ಮಾಮನಿ
3. ಸುಭಾಶ್ ಜೋಷಿ
4. ಎಸ್. ಎ. ಅಂಬಡಗಟ್ಟಿ
5. ಯು. ಬಿ. ಬಣಕಾರ್

ಸದನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ಹತ್ತನೇ ವಿಧಾನ ಸಭೆಯ ಐದನೇ ಅಧೀವೇಶನದಲ್ಲಿನ ಇಲ್ಲಿಯವರೆಗೆ ನಡೆದ ಸದನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿಯನ್ನು ಸಭೆಯ ಮುಂದೆ ಮಂಡಿಸಬಯಸುತ್ತೇನೆ.

ಸೋಮವಾರ ದಿನಾಂಕ 19ನೇ ಫೆಬ್ರವರಿ, 1996ರಂದು ಪ್ರಾರಂಭವಾದ ಈ ಸದನವು 16 ದಿನಗಳ ಕಾಲ ಕಾರ್ಯಕಲಾಪಗಳನ್ನು ನಡೆಸಿದೆ.

ಸದನವು 95 ಘಂಟೆಗಳ ಕಾಲ ಕಾರ್ಯಕಲಾಪಗಳನ್ನು ನಡೆಸಲಾಗಿರುತ್ತದೆ.

ಇತ್ತೀಚೆಗೆ ನಿಧನರಾದ 6 ಗಣ್ಯರುಗಳ ಗೌರವಾರ್ಥ ಸಂತಾಪ ನಿರ್ಣಯವನ್ನು ಅಂಗೀಕರಿಸಲಾಯಿತು.

ಈ ಅವಧಿಯಲ್ಲಿ 1232 ಪ್ರಶ್ನೆಗಳನ್ನು ಸ್ವೀಕರಿಸಲಾಗಿದ್ದು, ಆ ಪೈಕಿ 165 ಚುಕ್ಕೆ ಗುರುತಿನ ಪ್ರಶ್ನೆಗಳಲ್ಲಿ 157 ಪ್ರಶ್ನೆಗಳಿಗೂ, 759 ಚುಕ್ಕೆ ರಹಿತ ಪ್ರಶ್ನೆಗಳ ಪೈಕಿ 542 ಪ್ರಶ್ನೆಗಳಿಗೆ ಉತ್ತರಗಳನ್ನು ನೀಡಲಾಯಿತು.

ಒಂದು ದಿನ ಪ್ರಶ್ನೋತ್ತರ ವೇಳೆ ನಡೆಯದ ಕಾರಣ ಸದರ ಪ್ರಶ್ನೆಗಳ ಉತ್ತರಗಳನ್ನು ಸದನದ ಮುಂದೆ ಮಂಡಿಸಲಾಗಿದೆ.

ನಿಯಮ 58ರ ರೀತ್ಯಾ ಮೂರು ಅಲ್ಪಕಾಲಾವಧಿ ಪ್ರಶ್ನೆಗಳನ್ನು ಸ್ವೀಕರಿಸಲಾಗಿದ್ದು ಯಾವ ಪ್ರಶ್ನೆಗೂ ಸದನದಲ್ಲಿ ಉತ್ತರ ನೀಡಲಾಗಲಿಲ್ಲ.

82 ಗಮನ ಸೆಳೆಯುವ ಸೂಚನೆಗಳನ್ನು ಸ್ವೀಕರಿಸಿ, ಆ ಪೈಕಿ 7 ಗಮನ ಸೆಳೆಯುವ ಸೂಚನೆಗಳಿಗೆ ಸಂಬಂಧಪಟ್ಟ ಮಂತ್ರಿಗಳು ಸದನದಲ್ಲಿ ಹೇಳಿಕೆಯನ್ನು ನೀಡಿರುತ್ತಾರೆ.

ಮೂರು ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, ಅವುಗಳನ್ನು ಸದನದಲ್ಲಿ ಮಂಡಿಸಲಾಯಿತು.

ಅರ್ಧ ಗಂಟೆ ಚರ್ಚೆ ಸೂಚನೆಗೆ ಎರಡು ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಆ ಪೈಕಿ ಯಾವುದನ್ನೂ ಚರ್ಚೆಗೆ ತೆಗೆದುಕೊಂಡಿರುವುದಿಲ್ಲ.

ನಿಯಮ 351ರ ಅಡಿಯಲ್ಲಿ 117 ಸೂಚನೆಗಳನ್ನು ಸ್ವೀಕರಿಸಿದ್ದು, 53 ಸೂಚನೆಗಳಿಗೆ ಸಂಬಂಧಿಸಿದ ಮಂತ್ರಿಗಳು ಹೇಳಿಕೆ ನೀಡಿರುತ್ತಾರೆ.

ಖಾಸಗಿ ಸದಸ್ಯರ ಒಂದು ನಿರ್ಣಯವನ್ನು ಸ್ವೀಕರಿಸಿದ್ದು, ಅದನ್ನು ಚರ್ಚೆಗೆ ತೆಗೆದುಕೊಂಡಿಲ್ಲ.

ಈ ಅವಧಿಯಲ್ಲಿ 170 ಕಾಗದ ಪತ್ರಗಳನ್ನು ಸದನದ ಮುಂದೆ ಮಂಡಿಸಲಾಯಿತು.

ಈ ಅವಧಿಯಲ್ಲಿ ವಿವಿಧ ಸ್ಥಾಯಿ ಸಮಿತಿಗಳನ್ನು ರಚಿಸಲಾಯಿತು.

ಪ್ರಸ್ತುತ ಸದನದ ಅವಧಿಯಲ್ಲಿ ಕೆಳಕಂಡ ಮುಖ್ಯ ಪ್ರಕಟಣೆಗಳನ್ನು ಸಭೆಗೆ ತಿಳಿಸಲಾಯಿತು:-

ಡಾ॥ ಜೀವರಾಜ್ ಅಳ್ವರವರು ರಾಜಿನಾಮೆ ನೀಡಿರುವ ಬಗ್ಗೆ

ಬಿಹಾರ ವಿಧಾನ ಸಭೆಯ ನಿವೇದನ ಸಮಿತಿಯ ಸದಸ್ಯರು ಸದನವನ್ನು ವೀಕ್ಷಿಸಿದ ಬಗ್ಗೆ

ರಕ್ತದಾನ ಶಿಬಿರವನ್ನು ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯವರು ವಿಧಾನ ಸಭಾ ಸದಸ್ಯರುಗಳಿಗೆ ಏರ್ಪಡಿಸಿರುವ ಬಗ್ಗೆ

ಗ್ಯಾನೈಟ್ ಜಂಟಿ ಸದನ ಸಮಿತಿಯು ವರದಿ ನೀಡಲು, ಕಾಲಾವಧಿ ವಿಸ್ತರಣೆಯ ಬಗ್ಗೆ

ನಿಯಮಾವಳಿಗಳ ಸಮಿತಿಯ ರಚನೆ ಬಗ್ಗೆ

ಇಂಡೋ-ಅಮೇರಿಕನ್ ಕಲ್ಚರಲ್ ಡೆಲಿಗೇಷನ್ ರವರು ಸದನವನ್ನು ವೀಕ್ಷಿಸಿದ ಬಗ್ಗೆ

ಸಿಕ್ಕಿಂ ವಿಧಾನ ಸಭೆಯ ಭರವಸೆಗಳ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರು ಸದನವನ್ನು ವೀಕ್ಷಿಸಿದ ಬಗ್ಗೆ

ಅರುಣಾಚಲ ಪ್ರದೇಶದ ವಿಧಾನ ಸಭಾಧ್ಯಕ್ಷರು ಸಭೆಯನ್ನು ವೀಕ್ಷಿಸಿದ ಬಗ್ಗೆ

ಈ ಅವಧಿಯಲ್ಲಿ ನಾಲ್ಕು ನಿಲುವಳಿ ಸೂಚನೆಗಳನ್ನು ಸ್ವೀಕರಿಸಿದ್ದು, ಅವುಗಳ ಪ್ರಸ್ತಾವನೆಗೆ ಅನುಮತಿಯನ್ನು ತಡೆಹಿಡಿಯಲಾಯಿತು.

ನಿಯಮ 69ರ ಅಡಿಯಲ್ಲಿ ಆರು ಪ್ರಸ್ತಾವನೆಗಳನ್ನು ಸ್ವೀಕರಿಸಲಾಗಿದ್ದು, ಅವುಗಳಲ್ಲಿ ನಾಲ್ಕು ಪ್ರಸ್ತಾವನೆಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು.

1996-97ನೇ ಸಾಲಿನ ಅನುದಾನ ಬೇಡಿಕೆಗೆ (ಲೇಖಾನುದಾನ) ಮೇಲೆ ಚರ್ಚೆ ನಡೆಸಿ ಮತಕ್ಕೆ ಹಾಕಿ ಅಂಗೀಕರಿಸಲಾಯಿತು.

1995-96ನೇ ಸಾಲಿನ ಅಂದಾಜುಗಳ (ಅಂತಿಮ ಕಂತು)ನ್ನು ಸಭೆಯ ಮತಕ್ಕೆ ಹಾಕಿ ಅಂಗೀಕರಿಸಲಾಯಿತು.

ಈ ಅವಧಿಯಲ್ಲಿ ಒಟ್ಟು 14 ವಿಧೇಯಕಗಳನ್ನು ಸದನದಲ್ಲಿ ಮಂಡಿಸಲಾಯಿತು. ಅವುಗಳ ಪೈಕಿ 12 ವಿಧೇಯಕಗಳನ್ನು ಪರ್ಯಾಲೋಚಿಸಿ ಅಂಗೀಕರಿಸಲಾಯಿತು. ಒಂದು ವಿಧೇಯಕವನ್ನು ಪರ್ಯಾಲೋಚನೆಯ ಸಮಯದಲ್ಲಿ ತಡೆ ಹಿಡಿಯಲಾಯಿತು.

ಒಂದು ಶಾಸನಾತ್ಮಕ ನಿರ್ಣಯವನ್ನು ಚರ್ಚಿಸಿ ಅಂಗೀಕರಿಸಲಾಯಿತು.

ಈ ಅಧಿವೇಶನದ ಅವಧಿಯಲ್ಲಿ 4 ವಿಷಯ ಸಮಿತಿಗಳು ಸದನಕ್ಕೆ ವರದಿಗಳನ್ನೊಪ್ಪಿಸಿದವು

ವಿವಿಧ ವಿರೋಧ ಪಕ್ಷದ ಸದಸ್ಯರು ಆರು ಬಾರಿ ಸಭಾತ್ಯಾಗ ಮಾಡಿರುತ್ತಾರೆ ಹಾಗೂ ಧರಣಿ ನಡೆಸಿರುತ್ತಾರೆ.

ಇದರಲ್ಲಿ ಒಂದನ್ನು ನಮ್ಮ ಕಾರ್ಯಾಲಯದವರು ಸೇರಿಸಿರುವುದಿಲ್ಲ. ಮೊನ್ನೆ ಸದನದ ಕಾರ್ಯಕಲಾಪಗಳು ನಡೆಯತಕ್ಕಂಥ ಸಂದರ್ಭದಲ್ಲಿ ಮಾನ್ಯ ಹಿರಿಯ ಸದಸ್ಯರಾದ ನಾಗೇಗೌಡರು ಸ್ವಲ್ಪ ಸಿಟ್ಟಿನಿಂದ ಮಾತನಾಡಿದಾಗ ನಾನೂ ಕೂಡ ಆವೇಶದಿಂದ ವರ್ತಿಸಿದೆ ಎಂದು ನಂತರ ಅರಿವಾಯಿತು. ನಾನು ಈ ಸದನವನ್ನು ಮುಂದೂಡಿ ಹೊರಗೆ ಹೋಗಬೇಕಾಗಿರುವುದರಿಂದ ಮನಸ್ಸನ್ನು ಹಗುರ ಮಾಡಿಕೊಂಡು ಹೋಗಬೇಕಾಗಿದೆ. ನಾನೂ ಕೂಡ ಅಧ್ಯಕ್ಷನಾಗಿ ಸ್ವಲ್ಪ ಅತುರ ಪಟ್ಟನೇನೋ ಎನ್ನತಕ್ಕಂಥ ಪಶ್ಚಾತ್ತಾಪ ಪಟ್ಟು ನನ್ನ ವಿಷಾದವನ್ನು ಸದನಕ್ಕೆ ವ್ಯಕ್ತಪಡಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಇದೊಂದು ತರಹದ ವಂದನಾರ್ಪಣೆ ಇದ್ದ ಹಾಗೆ ಇದೆಯಲ್ಲಾ. ಹೇಗಿದು ಪರಿಸ್ಥಿತಿ ಅಂತ. ಇವತ್ತೇನಾದರೂ ಸಭೆ.....

ಅಧ್ಯಕ್ಷರು:- ಏನಿಲ್ಲ. ಈಗ ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಗಿದೆ.

(ಸದನವು ಸಂಜೆ 7 ಗಂಟೆ 35 ನಿಮಿಷಕ್ಕೆ ಅನಿರ್ದಿಷ್ಟ ಕಾಲದ ವರೆಗೆ ಮುಂದೂಡಲ್ಪಟ್ಟಿತು)

★ಈ ಚಿಹ್ನೆಯು ಮಾನ್ಯ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿರುವುದಿಲ್ಲವೆಂದು ಸೂಚಿಸುತ್ತದೆ.